ಆಲಮಟ್ಟಿ ಜಲಾಶಯದ ಕೊರ್ತಿ ಕೋಲ್ಹಾರ ಹಾಗೂ ಚಿಕ್ಕ ಪಡಸಲಗಿ ಸೇತುವೆಗಳ ಮುಳುಗಡೆ

279 (684) ಶ್ರೀ.ಜಗದೀಶ್ ತಿಮ್ಮನಗೌಡ ಪಾಟೀಲ (ಬೀಳಗಿ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಜಲಾಶಯದ ಕೊರ್ತಿ ಕೋಲ್ಹಾರ ಹಾಗೂ ಚಕ್ಕಪಡಸಲಗಿ ಸೇತುವೆಗಳು ಮುಳುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು):

ಅ) - ಬಂದಿದೆ -

ಆ) ಕೊರ್ತಿ ಕೋಲ್ಹಾರ ಸೇತುವೆ ವಿಸ್ತರಿಸುವ ಕಾಮಗಾರಿಗೆ ಅಂದಾಜನ್ನು ತಯಾರಿಸಿದ್ದು; ಇದನ್ನು ತಾಂತ್ರಿಕ ಸಲಹಾ ಸಮಿತಿ ಮುಂದೆಮಂಡಿಸಲಾಗಿತ್ತು. ಸದರಿ ಸಮಿತಿಯು ಕೆಲವು ಸಲಹೆಗಳೊಂದಿಗೆ ಹಿಂತಿರುಗಿಸಿದೆ. ಇವಕ್ಕೆ ಸಮಂಜಸ ಉತ್ತರ ಕಳುಹಿಸುವ ಹಂತದಲ್ಲಿದೆ. ಚಿಕ್ಕಪಡ ಸಲಗಿ ಸೇತುವೆ ನಿರ್ಮಾಣ ಕೆಲಸದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಬಾಗಲಕೋಟೆ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಕೆರೆಗಳಲ್ಲಿರುವ ಹೂಳು ಎತ್ತುವ ಕಾರ್ಯದ ಪ್ರಗತಿ.

280 (688) ಶ್ರೀ ಜಗದೀಶ್ ತಿಮ್ಮಣ್ಣಗೌಡ ಪಾಟೀಲ್ (ಬೀಳಗಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿನ ಕೆರೆಗಳ ಹೂಳೆತ್ತುವ ಕೆಲಸ ಪ್ರಾರಂಭಿಸುವುದಾಗಿ ಭರವಸೆ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿರುವ ಕೆರೆಗಳ ಸಂಖ್ಯೆ;

ಇ) ಅವುಗಳ ಪೈಕಿ ಹೂಳು ತುಂಬಿದ ಕೆರೆಗಳ ಸಂಖ್ಯೆ ಎಷ್ಟು; ಮತ್ತು ಹೂಳು ತೆಗಿಸಲಾದ ಕೆರೆಗಳ ಸಂಖ್ಯೆ ಎಷ್ಟು;

ಈ) ಬಾಗಲಕೋಟೆ ಹಾಗೂ ವಿಜಾಪುರ ಜಿಲ್ಲೆಗಳಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; ಮತ್ತು ಹೂಳು ತುಂಬಿದ ಕೆರೆಗಳ ಸಂಖ್ಯೆ ಎಷ್ಟು; ಈ ಕೆರೆಗಳ ಹೂಳೆತ್ತಲು ಒದಗಿಸಿದ ಹಣ ಎಷ್ಟು;

ಉ) ಹೂಳೆತ್ತುವ ಕಾರ್ಯ ಪ್ರಾರಂಭಿಸಲಾಗಿದೆಯೇ; ಹಾಗಿದ್ದರೆ ಎಂದಿನಿಂದ ಪ್ರಾರಂಭಿಸಲಾಗಿದೆ.

ಊ) ಅಂತರ್ಜಲ ಹೆಚ್ಚಿಸಲು ಸರ್ಕಾರ ತೆಗೆದು ಕೊಂಡ ಕ್ರಮಗಳು ಯಾವುವು?

ಶ್ರೀ ತಿಪ್ಪೇ ಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ

ಆ) 36,661

ಇ) ಹೂಳು ತುಂಬಿದ ಕೆರೆಗಳ ಸಮೀಕ್ಷೆ ಮಾಡಿರುವುದಿಲ್ಲ. ಆದರೆ ಹಲವು ಕೆರೆಗಳ ಸಮೀಕ್ಷೆಯ ಆಧಾರದ ಮೇಲೆ ರಾಜ್ಯದಲ್ಲಿರುವ ಬಹುತೇಕ ಎಲ್ಲಾ ಕೆರೆಗಳು ಹೂಳಿನಿಂದ ತುಂಬಿವೆ. ಇತ್ತೀಚೆಗಷ್ಟೇ ಪ್ರಾಯೋಗಿಕವಾಗಿ ರೈತರಪಾಲ್ಗೊಳ್ಳುವಿಕೆಯಿಂದ ಕೆರೆಯ ಹೂಳನ್ನು ತೆಗೆಯಲು ಪ್ರಾರಂಭಿಸಿದ್ದು 1997-98ನೇ ಸಾಲಿನಲ್ಲಿ ಒಟ್ಟು 121 ಕೆರೆಗಳ ಹೂಳುತೆಗೆಯಲಾಗಿದೆ.

ಇ) ಬಾಗಲಕೋಟೆ ಮತ್ತು ವಿಜಾಪುರ ಜಿಲ್ಲೆಯಲ್ಲಿ ಅನುಕ್ರಮವಾಗಿ 56 ಮತ್ತು 107 ಕೆರೆಗಳು ಹೂಳಿನಿಂದ ತುಂಬಿವೆ. ಅವುಗಳ ಪೈಕಿ ಬಿಜಾಪುರ ಜಿಲ್ಲೆಯ 3, ಬಾಗಲಕೋಟೆ ಜಿಲ್ಲೆಯ 5 ಒಟ್ಟು 13 ಕೆರೆಗಳಲ್ಲಿ ಹೂಳುತೆಗೆಯಲಾಗಿದೆ.

1998-99ನೇ ಸಾಲಿನಲ್ಲಿ ಆಯವ್ಯಯದಲ್ಲಿ ಬಿಜಾಪುರ ಜಿಲ್ಲೆಯ 3ಕೆರಗಳುಮತ್ತು ಬಾಗಲಕೋಟೆ ಜಿಲ್ಲೆಯ 5 ಕೆರೆಗಳಿಗೆ, ಒಟ್ಟು ರೂ. 30.04ಲಕ್ಷ ಅನುದಾನ ಒದಗಿಸಲಾಗಿದೆ.

ಉ) ಹೂಳೆತ್ತುವ ಕಾರ್ಯವನ್ನು ಏಪ್ರಿಲ್ 1998 ರಲ್ಲಿಪ್ರಾರಂಭಿಸಲಾಗಿದೆ.

ಊ) ಅಂತರ್ಜಲ ಹೆಚ್ಚಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಾಲಾಬಂಡ್, ಗಲ್ಲಿ ಪ್ಲಗ್ಗಿಂಗ್, ಕೃತಕ ಡೈಕ್, ಗೋಕಟೆಗಳಲ್ಲಿಹೂಳುತೆಗೆಯುವುದು, ಇಂಗು ಬಾವಿಗಳ ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳನ್ನು ಪ್ರಯೋಗಾತ್ಮಕವಾಗಿ ಹಮ್ಮಿಕೊಂಡಿದೆ.

ಮಲಪ್ರಭಾ-ಘಟಪ್ರಭಾ ಕಾಡಾ ಮುಚ್ಚುವ ಬಗ್ಗೆ

281(790) ಶ್ರೀ ಜಗದೀಶ್ ತಿಮ್ಮಣ್ಣಗೌಡ ಪಾಟೀಲ್ (ಬೀಳಗಿ) : ಮಾನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ 3 ವರ್ಷಗಳಲ್ಲಿ ಘಟಪ್ರಭಾ-ಮಲಪ್ರಭಾ ಕಾಡಾದಿಂದ ಕೈಗೊಂಡ ಕಾರ್ಯಗಳು ಯಾವುವು

ಆ) ಪ್ರತಿ ವರ್ಷ ಇಲ್ಲಿಯ ಸಿಬ್ಬಂದಿಯ ಸಂಬಳಹಾಗೂ ಭತ್ಯೆ ಇತ್ಯಾದಿಗಳಿಗೆ ಖರ್ಚು ಮಾಡುತ್ತಿರುವ ಹಣ ಎಷ್ಟು?

ಇ) ಮಲಪ್ರಭಾ-ಘಟಪ್ರಭಾ ಕಾಡಾ ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಈ) ಹಾಗಿದ್ದರೆ ಎಂದಿನಿಂದ ಮುಚ್ಚಲಾಗುವುದು ?

ಶ್ರೀ ಕೆ. ವೆಂಕಟೇಶ್ (ಕಾಡಾ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಘಟಪ್ರಭಾ ಮತ್ತುಮಲಪ್ರಭಾಕಾಡಾದಲ್ಲಿ ಕೇಂದ್ರ ಪುರಸ್ಕೃತ ಕಾಡಾ ಯೋಜನೆ ಅಡಿಯಲ್ಲಿ ಹೊಲಗಾಲುವೆ ನಿರ್ಮಾಣ, ಸರ್ವೆ (ಟೋಪೋ ಗ್ರಾಪಿಕಲ್ ಸಾಯಿಲ್ ಇತರೆ) ವಾರಬಂದಿ ಬೆಳೆಗಳಪ್ರಾತ್ಯಕ್ಷತೆ, ಜವಳು ಭೂಮಿ ಕೃಷಿ ಯೋಗ್ಯ ಮಾಡುವಿಕೆ ಯೋಜನಾ ಅಭ್ಯಾಸ, ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ಹಾಗೂ ರಾಜ್ಯಯೋಜನೆ ಅಡಿಯಲ್ಲಿ ಆಯಕಟ್ಟು ರಸ್ತೆ, ಗೋಡೌನ್